ಮುಖ ಬಾಡಿತ್ತು', ಎಂದು ಶುಷ್ಕ ನಗೆ ಬೀರಿದ್ದ.

'ಚಿಂತೆ ಯಾಕೆ... ನಿನಗೆ ಯಶಸ್ವಿಯಾಗಿ ಚಿಕಿತ್ಸೆ ನಡೆಸಲಾಗಿದೆ. ಹಿಂದಿನಂತೆ ಓಡಾಡಲು ಕೆಲ ಸಮಯ ಹಿಡಿಯಬಹುದು. ನಿನ್ನ ತಲೆಗೆ ಪೆಟ್ಟಾಗಿರುವುದರಿಂದ, ನರಗಳು ಕೂಡಿಕೊಂಡು ನಿಮ್ಮ ಚಟುವಟಿಕೆಯಲ್ಲಿ ಸಮತೋಲನ ಸ್ಥಾಪಿಸಬೇಕಿರುತ್ತದೆ. ಮನಃಶಾಸ್ತ್ರಜ್ಞರು ಏನು ಹೇಳುತ್ತಿದ್ದಾರೆ?' ಎಂದು ಸಮೀಪದ ಕ್ಯಾಬಿನ್‌ನೆಡೆ ಅವರನ್ನು ಹುಡುಕಿಕೊಂಡು ಹೋದಾಗ ಹನ್ನಾಳ ದೃಷ್ಟಿ ಸುತ್ತಲಿನ ವ್ಯವಸ್ಥೆಯೆಡೆ ಹಾದಿತ್ತು.

'ಸೋನು'ವಿನ ಬದಿಯಲ್ಲಿ ಕಾಲ್ತುಳಿಯುವ ಯಂತ್ರ, ಮೈಗೆ ಕಸರತ್ತು ನೀಡುವ ವಿವಿಧ ರೊಬೋ ಉಪಕರಣಗಳಿದ್ದು, ಈ ಮಧ್ಯೆ ಅವನೂ ಕೆಲವು ಉಪಕರಣಗಳನ್ನು ಮೈಯಲ್ಲಿ ಅಳವಡಿಸಿಕೊಂಡಿದ್ದರಿಂದ ಒಂದು ಯಂತ್ರಮಯ ಜಗತ್ತಿನೊಳಗೆ ಕಾಲಿರಿಸಿದಂತಹ ಅನುಭವವಾಗಿತ್ತು. ಈ ವಿಭಾಗದಲ್ಲಿ ರೋಗಿಯ ಮಾಂಸಖಂಡಗಳು, ಮೂಳೆಗಳು, ತಂತು ಕಟ್ಟು ಹಾಗೂ ನರಗಳಿಗಾದ ಘಾಸಿಯನ್ನು ವಾಸಿಪಡಿಸಲು ವ್ಯವಸ್ಥೆಗಳಿತ್ತು. ಅವನ ಸ್ಥಿತಿಗೆ ಮನಮಿಡಿದು ಅವಿರತ್‌ನನ್ನು ಹಿಂಬಾಲಿಸಿ ಮನಃಶಾಸ್ತ್ರಜ್ಞರಿದ್ದ ಕ್ಯಾಬಿನ್ ಒಳಗೆ ಹೆಜ್ಜೆ ಹಾಕಿದಳು.

'ಓ... ಬನ್ನಿ ಅವಿರತ್', ಎಂದು ಅವಿರತ್‌ನನ್ನು ನೋಡಿದೊಡನೆಯೇ ಮನಃಶಾಸ್ತ್ರಜ್ಞರು ಹಸನ್ಮುಖರಾಗಿ ಸ್ವಾಗತಿಸಿದ್ದರು. ಅವನ ಹಿಂದೆ ಬಂದ ಹನ್ನಾಳ ಪರಿಚಯವನ್ನೂ ಅವರಿಗೆ ಮಾಡಿಸಿದ ಅವಿರತ್ ಅವರ ಮುಂದಿನ ಆಸನದಲ್ಲಿ ಆಸೀನರಾಗಿ ತನ್ನ ಪ್ರಕರಣದಲ್ಲಿನ ರೋಗಿಗಳ ಆರೋಗ್ಯಸ್ಥಿತಿಯನ್ನು ವಿಚಾರಿಸಿದ.

'ಸೋನು... ಕಲಿ... ಗುಣ... ಗ್ರೇಸಿ... ಇವರುಗಳ ಚಲನೆಯಲ್ಲಿ, ನರ ಹಾಗೂ ಮಾಂಸಖಂಡಗಳ ಸಮನ್ವಯತೆಯಲ್ಲಿ ಬಹಳಷ್ಟು ಸುಧಾರಣೆ ಕಂಡುಬಂದಿದೆ' ಎಂದು ಚಿಕಿತ್ಸಕರು ವಿವರಿಸಿದರು.

'ಅವರುಗಳು ಮುಂದೆ ವಾಹನ ಓಡಿಸಬಹುದೇ ಡಾಕ್ಟರ್...?' ತನ್ನ ಸಂದೇಹವನ್ನು ಅವರ ಮುಂದೆ ಅನಾವರಣಗೊಳಿಸಿದ್ದ.

'ವಾಹನ ಓಡಿಸುವುದಕ್ಕಿಂತ ಹೆಚ್ಚಾಗಿ ಅವರು ದೈನಂದಿನ ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವರೇ ಎಂಬುದು ಮುಖ್ಯ ಅವಿರತ್... ಅಪಘಾತವಾದ ಬಳಿಕ ಅವರು ಸುಸ್ಥಿತಿಗೆ ಬರುವವರೆಗೂ ಅವರಿಗೆ ಸೂಕ್ತ ವ್ಯಾಯಾಮ ಹಾಗೂ ಶುಶ್ರೂಷೆ ಅಗತ್ಯ. ಆದರೆ, ಅಪಘಾತ ತರುವ ಶಾಕ್‌ನಿಂದ ಅವರು ಹೊರಬರಲು ಕೆಲವು 'ಮರೆವಿನ' ವ್ಯಾಯಾಮ ನೀಡುತ್ತಿದ್ದೇವೆ. ತಮ್ಮೊಂದಿಗಿದ್ದ ತಮ್ಮ ಕುಟುಂಬಸ್ಥರು, ಇಲ್ಲವೇ ಸ್ನೇಹಿತರಿಗೆ ಯಾವುದಾದರೂ ದುರ್ಘಟನೆ ಸಂಭವಿಸಿದ್ದರೆ ಅದು ಅವರ ಮನಸ್ಥಿತಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದುಂಟು. ಮರೆವಿನ ವ್ಯಾಯಾಮದ ಬಳಿಕ ಸುಸ್ಥಿತಿಗೆ ಬಂದಾಗ ಒತ್ತಡದ ನಿರ್ವಹಣೆ ಹಾಗೂ ಭಯ ಹೋಗಲಾಡಿಸಿ ಮತ್ತೆ ವಾಹನ ಚಾಲನೆಗೆ ಅನುವು ಮಾಡಿಕೊಡುತ್ತೇವೆ.'

'ಮರೆವಿನ'ವ್ಯಾಯಾಮಕ್ಕೆ ಇವರು ಉತ್ತಮವಾಗಿ ಸ್ಪಂದಿಸಿದರೇ ಡಾಕ್ಟರ್?' ಹನ್ನಾ ಕುತೂಹಲದಿಂದ ಪ್ರಶ್ನಿಸಿದಳು.

'ಆ ಶಾಕ್‌ನಿಂದ ಹೊರಬರುವುದು ದುಸ್ತರವೇ. ಅವರ ಮೆದುಳಿಗೆ ಮಾನಸಿಕ ಪೆಟ್ಟಾಗಿ ಮುಂದೆಂದೂ ವಾಹನವನ್ನು ಚಲಾಯಿಸಬಾರದೆಂಬ ಮನಸ್ಥಿತಿಯನ್ನು ಅವರು ತಲುಪಿರುತ್ತಾರೆ. ಅವರನ್ನು ಆ ಸ್ಥಿತಿಯಿಂದ ಹೊರತರುವ ಪ್ರಯತ್ನ ಮಾಡ್ತಿದ್ದೇವೆ.'

ಅವರು ಅವಿರತ್ ಹಾಗೂ ಹನ್ನಾಳೊಂದಿಗೆ ಮಾತುಕತೆ ನಡೆಸುತ್ತಿರುವಂತೆಯೇ ಸಾರ್ವಜನಿಕರಂತೆ ತೋರಿದ ಸೇವಾತಂಡವೊಂದು ಅಲ್ಲಿಗೆ ಆಗಮಿಸಿತ್ತು. ಆ ವಿಭಾಗದ ಪ್ರವೇಶದ್ವಾರದಲ್ಲಿದ್ದ ಹಾಜರಾತಿ ಉಪಕರಣದ ಮುಂದೆ ಅವರು ನಿಂತುಕೊಳ್ಳುತ್ತಿದ್ದಂತೆ ಅವರನ್ನು ಗುರುತಿಸಿದ ಉಪಕರಣ 'ಸರಿ' ಎಂಬ ಅನುಮೋದನೆ ನೀಡುತ್ತಿತ್ತು.

ಮನಃಶಾಸ್ತ್ರಜ್ಞರಿದ್ದ ಕೊಠಡಿಯೊಳಗೆ ಆ ನಾಲ್ಕೈದು ಮಂದಿಯ ತಂಡ ಪ್ರವೇಶಿಸಿದೊಡನೆ ಅವರಿಗೆ ಶುಭಾಶಯ ಕೋರಿ ಅವರ ಮುಂದಿದ್ದ ಅವರ ಕರ್ತವ್ಯದ ಚಾರ್ಟ್‌ನ್ನು ಪಡೆದು ಸೇವೆಗೆ ಅನುವಾದರು.

'ಗುಣ ಅನ್ನೋ ರೋಗಿಗೆ ಎಡಗಾಲು ನೋವು ಎಂದು ಹೇಳುತ್ತಿದ್ದಳು. 'ಔದ್ಯೋಗಿಕ ಚಿಕಿತ್ಸಕ' ಕೆಲವು ಹೊತ್ತಿಗೆ ಬರಲಿದ್ದಾರೆ. ಅವರ ಅಭಿಪ್ರಾಯ ಪಡೆದು ಮುಂದುವರಿಸಿ', ಎಂದು ಮನಶ್ಶಾಸ್ತ್ರಜ್ಞರು ನೀಡಿದ ಸೂಚನೆಗೆ ಅವರು 'ಆಯ್ತು' ಎಂಬಂತೆ ತಲೆಯಾಡಿಸಿ ಕ್ಯಾಬಿನ್‌ನಿಂದ ಹೊರನಡೆದಿದ್ದರು. ಮನಃಶಾಸ್ತ್ರಜ್ಞರ ದೃಷ್ಟಿ ಮತ್ತೆ ಅವಿರತ್‌ನ ಮೇಲೆ ನೆಟ್ಟು ತಮ್ಮ ಸಂಭಾಷಣೆಯನ್ನು ಮುಕ್ತಾಯಗೊಳಿಸಲು ಅಣಿಯಾದರು.

## ಚೈತನ್ಯದ ಚಿಲುಮೆಗಳು

ಬೇಲೂರಿನಲ್ಲಿ
ಶಿಲಾಬಾಲಿಕೆಯರು
ನಮ್ಮ ಮನೆಯಲ್ಲಿ
ಶಾಲಾಬಾಲಿಕೆಯರು
ಅವರು ಮೌನ ಪ್ರತಿಮೆಗಳು
ಇವರು ಚೈತನ್ಯದ ಚಿಲುಮೆಗಳು

■ ಶ್ರೀಕಂಠ ಪ್ರಸಾದ್, ಶಿವಮೊಗ್ಗ




'ಅಪಘಾತಗಳು ಮನುಷ್ಯನ ದೇಹದ ಮೇಲಿನ ಗಾಯಕ್ಕಿಂತ ಮೆದುಳಿನ ಮೇಲೆ ಹಾಗೂ ಅವರ ನೆನಪಿನ ಮೇಲೆ ಗಾಯವನ್ನುಂಟು ಮಾಡುತ್ತದೆ ಅವಿರತ್. ಅವರ ಇಡೀ ಜೀವನದಲ್ಲೇ ಮರೆಯಲಾಗದ ಘಟನೆಯಾಗಿ ಸಂಭವಿಸಿ ಅವರ ದೈಹಿಕ ವ್ಯವಸ್ಥೆಯನ್ನೇ ಜಾಲಾಡಿಸಿದಂತಹ ಅನುಭವವಾಗುವುದುಂಟು. ಅವರ ನರಕೋಶಗಳಲ್ಲಿ ಆ ಅಪಘಾತದ ನೆನಪನ್ನು ಹೋಗಲಾಡಿಸಲು ನಾವು ಸಾಕಷ್ಟು ಪ್ರಯತ್ನಿಸ್ತಿದ್ದೀವಿ'.

'ಡಾಕ್ಟರ್, ಇವರು ಮನೆಯಿಂದ ಇಲ್ಲಿಗೆ ಚಿಕಿತ್ಸೆಗಾಗಿ ಕರೆತರಲು ಸೂಕ್ತ ವ್ಯವಸ್ಥೆಯಾಗ್ತಿದೆಯಷ್ಟೇ.'

'ಹೌದು, ಕೊಂಚ ಗಂಭೀರ ಪ್ರಕರಣಗಳಲ್ಲಿ ನಮ್ಮ 'ಆಂಬ್ಯುಲೆನ್ಸ್' ಮಾದರಿಯ 'ಶುಶ್ರೂಷಾ' ವಾಹನ ಅವರನ್ನು ದಿನವಹಿ ಕರೆತರುತ್ತಿದೆ. ವ್ಯಾಯಾಮವಷ್ಟೇ ಅವಶ್ಯಕತೆ ಇರುವ ಕೆಲವರಿಗೆ ಅವರಿರುವೆಡೆಯೇ ಚಿಕಿತ್ಸೆ ನೀಡ್ತಿದ್ದೀವಿ.

ಧನ್ಯವಾದಗಳು. ನಾವಿನ್ನು ಹೊರಡ್ತೀವಿ ಡಾಕ್ಟರ್. ಮತ್ತೆ ಸಿಗೋಣ', ಎಂದು ಅವಿರತ್ ಹಾಗೂ ಹನ್ನಾ ಅವರ ಕೈ ಕುಲುಕಿ ಕ್ಯಾಬಿನ್ ಹೊರ ನಡೆದಿದ್ದರು.

ಹೊರಗಿನ ವಿಶಾಲ ಚಿಕಿತ್ಸಾ ಕೊಠಡಿಯಲ್ಲಿ 'ಸೋನು' ಮತ್ತಿತರರಿಗೆ ಔದ್ಯೋಗಿಕ ಚಿಕಿತ್ಸಕ ಹಾಗೂ ಸಮಾಜ ಸೇವಕರು ಸೇರಿ ಕೆಲವೊಂದು ವ್ಯಾಯಾಮ ಹಾಗೂ ಆಟಿಕೆಗಳನ್ನು ನೀಡುತ್ತಿದ್ದುದು ಕಂಡುಬಂದಿತ್ತು. ಅವರ ಸಮೀಪ ಹೋದಾಗ 'ಔದ್ಯೋಗಿಕ ಚಿಕಿತ್ಸಕ'ನೆಂಬುದು ಒಂದು ರೊಬೋಟ್‌ಗೆ ನಿರ್ದಿಷ್ಟವಾಗಿ 'ಪ್ರೋಗ್ರಾಂ' ಮಾಡಿ ಇರಿಸಲಾಗಿತ್ತೆಂದು ಮನವರಿಕೆಯಾಯಿತು. ಆದರೆ, ದಿಢೀರ್ ಎಂದು ಬಂದೆರಗಿದ ಘಟನೆಯ ನೆನಪಿನಿಂದ ಹೊರಬಂದು ಮತ್ತೆ ದಿನವಹಿ ಚಟುವಟಿಕೆಗಳಲ್ಲಿ ಭಾಗವಹಿಸುವುದಷ್ಟು ಸುಲಭವೇ?

ಅವಿರತ್ ಹನ್ನಾಳ ಜೊತೆಗೂಡಿ ತನ್ನ ವಾಹನದ ಸಮೀಪ ಬರುವಷ್ಟರಲ್ಲಿ 'ಕೆಫೆಟೇರಿಯಾ'ದ ರೊಬೋ ಮಾಣಿ ಪಾನೀಯ ಹಾಗೂ ತಿನಿಸನ್ನು ಅವರ ಬಳಿಗೇ ಬಂದೊದಗಿಸಿತ್ತು. ಅವಿರತ್‌ನ ಮುಂದಾಲೋಚನೆಗೆ ಮೆಚ್ಚಿ ಹನ್ನಾ ಅವನ ಕಾರಿನಲ್ಲಿಯೇ ಸೀಟ್ ಎಳೆದು ಕುಳಿತಳು.

'ಈ ಫಾಲೋ ಅಪ್ ಅನ್ನುವುದು ಬಹಳ ತಾಳ್ಮೆಯನ್ನು ಬೇಡುವ ಕೆಲಸವಲ್ವೇ ಹನ್ನಾ? ಪ್ರಕರಣಕ್ಕೆ ಅಂದೇ ತಾತ್ವಿಕ ಅಂತ್ಯ ಕಾಣಿಸಿದರೂ ಗಾಯಾಳು ಚಾಲಕ ಮತ್ತೆ ಸಹಜವಾಗಿ ವಾಹನ ಓಡಿಸುವಂತೆ ಕ್ರಮ ತೆಗೆದುಕೊಳ್ಳುವುದು ಪರಿಶ್ರಮದ ಕೆಲಸ. ಹೊಸದಾಗಿ ವಾಹನ ಪರವಾನಗಿ ಪಡೆದುಕೊಳ್ಳುವ ಚಾಲಕನಿಗೂ ಅಪಘಾತವಾದ ಬಳಿಕ ಚಾಲಕನನ್ನು ಮತ್ತೆ ಹಿಂದಿನ ಸ್ಥಿತಿಗೆ ತರುವುದಕ್ಕೂ ಬಹಳಷ್ಟು ವ್ಯತ್ಯಾಸವಿದೆಯಲ್ಲವೇ...' ಎಂದು ಪಾನೀಯ ಚಪ್ಪರಿಸುತ್ತಾ ಹನ್ನಾ ಸಹಮತ ವ್ಯಕ್ತಪಡಿಸಿದಳು.

'ನಾನದನ್ನು ಒಪ್ಪಿಕೊಳ್ಳುತ್ತೇನೆ. ಮೊದಲನೆಯವನು ಆತುರಗಾರ, ಉತ್ಸಾಹಿ.